**ಕರ್ನಾಟಕ ಸರ್ಕಾರ**

**ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ**

ಸಂಖ್ಯೆ:ಸಚುಆ/20/ಗುರ್ತು/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ (ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ:14.08.2013

**ಸುತ್ತೋಲೆ**

**ವಿಷಯ:-** ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಚುನಾವಣೆ – ಮತದಾರರನಿಗೆ ಆತನು ಮತವನ್ನು ದಾಖಲಿಸಲು ಅನುಮತಿ ನೀಡುವುದಕ್ಕೆ ಮೊದಲು ಅಳಿಸಲಾಗದ ಶಾಯಿಯನ್ನು ಹಚ್ಚುವ ಕುರಿತು.

***

ಕರ್ನಾಟಕ ಸಹಕಾರ ಸಂಘಗಳ ನಿಯಮಗಳು, 1960 ರ ನಿಯಮ 13-ಎ ರೀತ್ಯಾ (ಸಂಕ್ಷಿಪ್ತವಾಗಿ 'ನಿಯಮ') ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ಸಂಘದ ಪ್ರತಿಯೊಬ್ಬ ಸದಸ್ಯನಿಗೆ ಗುರುತಿನ ಕಾರ್ಡ್ ನೀಡತಕ್ಕದ್ದಾಗಿದೆ. ಸಹಕಾರ ಸಂಘದ ಹೆಸರು, ಸದಸ್ಯನ ಪೂರ್ಣ ಹೆಸರು, ಸದಸ್ಯತ್ವ ಸಂಖ್ಯೆ, ವಯಸ್ಸು ವಾಸಸ್ಥಾನದ ವಿಳಾಸ ಈ ವಿವರಗಳು ಗುರುತಿನ ಕಾರ್ಡ್‌ನಲ್ಲಿ ಇರತಕ್ಕದ್ದು ಹಾಗೂ ಸದಸ್ಯನ ಇತ್ತೀಚಿನ ಭಾವಚಿತ್ರವನ್ನು ಗುರುತಿನ ಕಾರ್ಡ್‌ನಲ್ಲಿ ಅಂಟಿಸಿ ಸದಸ್ಯನು ಸಹಿಮಾಡಿರಬೇಕು ಮತ್ತು ಸಂಘದ ಮೊಹರಿನೊಡನೆ ಮುಖ್ಯ ಕಾರ್ಯನಿರ್ವಾಹಕನು ಅದನ್ನು ದೃಢೀಕರಿಸತಕ್ಕದ್ದಾಗಿದೆ.

ನಿಯಮ 14'0' ರೀತ್ಯಾ ಮತದಾನ ಮಾಡುವ ಸ್ಥಳದಲ್ಲಿ ಒಂದು ರಿಜಿಸ್ಟರ್‌ನ್ನು ಇಟ್ಟಿರತಕ್ಕದ್ದು ಮತ್ತು ಪ್ರತಿಯೊಬ್ಬ ಮತದಾರನು ನಿಯಮ 13 ಎ ರಡಿ ನೀಡಲಾದ ಗುರುತಿನ ಕಾರ್ಡ್‌ನ್ನು ಹಾಜರ್‌ಪಡಿಸಿ ರಿಜಿಸ್ಟರ್‌ನಲ್ಲಿ ಸಹಿ ಮಾಡತಕ್ಕದ್ದು ಮತ್ತು ಗುರುತಿನ ಚೀಟಿಯನ್ನು ಪಡೆದುಕೊಳ್ಳತಕ್ಕದ್ದು, ನಿಯಮ 14 K ರೀತ್ಯಾ ಮತದಾನವನ್ನು ನಡೆಸುವ ಪ್ರತಿಯೊಂದು ಚುನಾವಣೆಯಲ್ಲಿ ಮತಗಳನ್ನು ಮತ ಪತ್ರಗಳ ಮೂಲಕ ನೀಡತಕ್ಕದ್ದು ಮತ್ತು ಚುನಾವಣೆಯಲ್ಲಿ ಮತ ನೀಡುವ ಎಲ್ಲಾ ಮತದಾರರು (ಸದಸ್ಯರು/ಪ್ರತಿನಿಧಿಗಳು/ಡೆಲಿಗೇಟುಗಳು) ಮತದಾನ ಕೇಂದ್ರದಲ್ಲಿ ಖುದ್ದಾಗಿ ಮತ ನೀಡತಕ್ಕದ್ದು ಮತ್ತು ಯಾವ ಮತವನ್ನು ಪ್ರಾಕ್ಸಿ (Proxy) ಮೂಲಕ ದಾಖಲಿಸಲು ಅನುಮತಿಸತಕ್ಕದ್ದಲ್ಲ, ನಿಜವಾದ ಮತದಾರನು ಮತದಾನ ಮಾಡಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ರೀತಿ ನಿಯಮಗಳನ್ನು ರೂಪಿಸಲಾಗಿದೆ. ಆದಾಗ್ಯೂ ಸಹಕಾರ ಸಂಸ್ಥೆಗಳ ಚುನಾವಣೆಗಳಲ್ಲಿ ಒಬ್ಬರು ಮತ್ತೊಬ್ಬರ ಹೆಸರಿನಲ್ಲಿ ಮತ ಚಲಾಯಿಸುವುದನ್ನು ತಡೆಗಟ್ಟಲು ಅಳಿಸಲಾಗದ ಶಾಯಿಯನ್ನು ಬಳಸಿ ಮತದಾರನ ಬೆರಳಿಗೆ ಹಚ್ಚುವುದು ಪದ್ಧತಿಯಾಗಿರುತ್ತದೆ.

ಲೋಕಸಭೆ, ವಿಧಾನಸಭೆ, ಸ್ಥಳೀಯ ಸಂಸ್ಥೆಗಳೂ ಸೇರಿದಂತೆ ಎಲ್ಲಾ ಚುನಾವಣೆಗಳಲ್ಲಿ ಮತದಾರನಿಗೆ ಆತನ ಮತವನ್ನು ದಾಖಲಿಸಲು ಅನುಮತಿ ನೀಡುವುದಕ್ಕೆ ಮೊದಲು ಅಳಿಸಲಾಗದ ಶಾಯಿಯನ್ನು ಹಚ್ಚುವುದು ಹಾಗೂ ಮತದಾರನ ಸಹಿ /ಹೆಬ್ಬೆಟ್ಟಿನ ಗುರುತನ್ನು ಪಡೆಯುವುದು ನಿಯಮಾನುಸಾರ ಕಡ್ಡಾಯವಾಗಿರುತ್ತದೆ. ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಎಡಗೈ ಉಂಗುರ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕಲಾಗಿತ್ತು. ಸಹಕಾರ ಸಂಸ್ಥೆಗಳ ಚುನಾವಣೆಗಳಲ್ಲಿ ಒಬ್ಬ ವ್ಯಕ್ತಿಯೇ ಒಂದಕ್ಕಿಂತ ಹೆಚ್ಚು ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಸಾಧ್ಯತೆ ಇರುತ್ತದೆ. ಉದಾ ಹಾಲು ಉತ್ಪಾದಕರ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಿ.ಸಿ.ಎ.ಆರ್.ಡಿ ಬ್ಯಾಂಕ್ ಹಾಗೂ ಟಿ.ಎ.ಪಿ.ಸಿ.ಎಂ.ಎಸ್‌ನಲ್ಲೂ ಸಹ ಸದಸ್ಯತ್ವ ಹೊಂದಿರಬಹುದಾಗಿದೆ. ಒಂದು ಸಂಘದಲ್ಲಿ ಮತದಾನಕ್ಕೆ ಅರ್ಹತೆ ಹೊಂದಿದ್ದು ಮತ್ತೊಂದು ವರ್ಗದ ಸಂಘದಲ್ಲಿ ಮತದಾನದ ಅರ್ಹತೆಯೂ ಇಲ್ಲದಿರಬಹುದು ಅಥವಾ ಒಂದಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಮತದಾನದ ಅರ್ಹತೆಯನ್ನು ಗಳಿಸಿರಬಹುದು. ಈ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಆಯೋಗವು ನಡೆಸಿದ ವಿಡಿಯೋ ಸಮ್ಮೇಳನದಲ್ಲಿ ಕೆಲವು ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು ಈ ವಿಷಯದ ಬಗ್ಗೆ ಪ್ರಸ್ತಾಪಿಸಿ ಮಾರ್ಗದರ್ಶನವನ್ನು ಕೋರಿದ ಹಿನ್ನೆಲೆಯಲ್ಲಿ ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿದೆ.

---2

ಸಹಕಾರ ಚುನಾವಣಾ ಆಯೋಗವು ಪ್ರಸ್ತುತ ಪ್ರಾಥಮಿಕ ಹಂತದಲ್ಲಿ ವಿವಿಧ ವರ್ಗಗಳ ಸಹಕಾರ ಸಂಘಗಳಿಗೆ ಆಡಳಿತ ಮಂಡಳಿ ಚುನಾವಣೆಗಳನ್ನು ನಡೆಸುವ ಸಂಬಂಧ ಚುನಾವಣಾ ದಿನಾಂಕಗಳನ್ನು ನಿಗದಿಪಡಿಸಿದ್ದು ಅದರಂತೆ ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಚುನಾವಣಾ ವೇಳಾಪಟ್ಟಿ ಪ್ರಕಟಿಸಿರಬಹುದು.

| ಕ್ರಸಂ | ಸಂಘದ ಹೆಸರು | ದಿನಾಂಕ |
|---|---|---|
| 1 | ಹಾಲು ಉತ್ಪಾದಕರ ಸಹಕಾರ ಸಂಘಗಳು | 25.08.2013 |
| 2 | ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು | 01.09.2013 |
| 3 | ಇತರೆ ಸಹಕಾರ ಸಂಘಗಳು(ಕೃಷಿಯೇತರ ಪತ್ತಿನ ಸಂಘಗಳು, ಅರ್ಬನ್ ಬ್ಯಾಂಕ್‌ಗಳು ಮತ್ತು ಇತರೆ ಪತ್ತಿನ ಸಂಘಗಳು) | 7/8.09.2013 |
| 4 | ಇತರೆ ಸಹಕಾರ ಸಂಘಗಳು (ಗ್ರಾಹಕರ ಸಂಘಗಳು, ಇನ್ನಿತರೆ ಎಲ್ಲಾ ಪತ್ತೇತರ ಸಹಕಾರ ಸಂಘಗಳು / ಇತರೆ ಸಂಘಗಳು) | 15.09.2013 |

ಮೇಲ್ಕಂಡ ಪರಿಸ್ಥಿತಿಯಲ್ಲಿ ದಿನಾಂಕ:25.08.2013 ರಂದು ನಡೆಯಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮಂಡಳಿಗಳ ಸಾಮಾನ್ಯ ಚುನಾವಣೆ ಸಂಬಂಧ ಎಡಗೈ ತೋರು ಬೆರಳಿನ ಮೇಲೆ ಒಂದು ಸ್ಪಷ್ಟವಾದ ಗುರುತು ಉಳಿಯುವ ರೀತಿಯಲ್ಲಿ ಅಳಿಸಲಾಗದ ಶಾಯಿಯನ್ನು ಹಾಕತಕ್ಕದ್ದು. ಒಂದು ವೇಳೆ ಲೋಕಸಭಾ ಉಪ ಚುನಾವಣೆಯಲ್ಲಿ ಅಥವಾ ಇನ್ನಾವುದೇ ಇತ್ತೀಚಿನ ಚುನಾವಣೆಗಳಲ್ಲಿ ಇದೇ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕಿದ್ದಲ್ಲಿ ಅಂತಹ ಪ್ರದೇಶಗಳಲ್ಲಿ ಎಡಗೈ ಮಧ್ಯದ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕತಕ್ಕದ್ದು ದಿನಾಂಕ:01.09.2013 ರಂದು ನಡೆಯಲ್ಲಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮಂಡಳಿ ಚುನಾವಣೆ ಸಂಬಂಧ ಎಡಗೈ ಕಿರುಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕತಕ್ಕದ್ದು, ಉಳಿದಂತೆ ದಿನಾಂಕ:07/08.09.2013 ರಂದು ನಡೆಯುವ ವಿವಿಧ ವರ್ಗಗಳ ಸಹಕಾರ ಸಂಘಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಬಲಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕತಕ್ಕದ್ದು, ದಿನಾಂಕ:15.09.2013 ರಂದು ನಡೆಯುವ ಇತರ ಸಹಕಾರ ಸಂಘಗಳ ಮಂಡಳಿಗಳ ಸಾಮಾನ್ಯ ಚುನಾವಣೆ ಸಂಬಂಧ ಬಲಗೈ ಮಧ್ಯದ ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಾಕತಕ್ಕದ್ದು.

ಮತದಾರನಿಗೆ ಎಡಗೈ ತೋರು ಬೆರಳು ಇಲ್ಲದಿದ್ದಾಗ ಅವರ ಎಡಗೈಯಲ್ಲಿರುವ ಹೆಬ್ಬೆರಳಿಗೆ ಅಳಿಸಲಾಗದ ಶಾಯಿಯನ್ನು ಹಚ್ಚತಕ್ಕದ್ದು ಆತನ ಎಡಗೈಯಲ್ಲಿ ಯಾವುದೇ ಬೆರಳುಗಳಿಲ್ಲದಿದ್ದಲ್ಲಿ ಬಲಗೈಯಲ್ಲಿರುವ ಮಧ್ಯದ ಬೆರಳಿಗೆ ಹಚ್ಚತಕ್ಕದ್ದು, ಬಲ ತೋರು ಬೆರಳನ್ನು ಹೊಂದಿರದಿದ್ದರೆ ಆತನು ಹೊಂದಿರುವ ಇತರೆ ಯಾವುದೇ ಬೆರಳಿನ ಮೇಲೆ ಹಾಕತಕ್ಕದ್ದು. ಆತನಿಗೆ ಎರಡು ಕೈಗಳಲ್ಲೂ ಬೆರಳುಗಳಿಲ್ಲದಿದ್ದಲ್ಲಿ ಶಾಯಿಯನ್ನು ಆತನಿಗೆ ಇರಬಹುದಾದಂಥ ಎಡ ಅಥವಾ ಬಲ ಮೊಂಡು ಕೈನ ತುತ್ತ ತುದಿಯ ಭಾಗದಲ್ಲಿ ಹಚ್ಚತಕ್ಕದ್ದು.

ಯಾವುದೇ ವಿಶೇಷ ಸಂದರ್ಭದಲ್ಲಿ ಅಳಿಸಲಾಗದ ಶಾಯಿಯನ್ನು ಹಚ್ಚುವಲ್ಲಿ ಯಾವುದೇ ಸಮಸ್ಯೆ / ಉದ್ಭವಿಸಿದಲ್ಲಿ ರಿಟರ್ನಿಂಗ್ ಆಫೀಸರ್ ಜಿಲ್ಲಾ ಚುನಾವಣಾಧಿಕಾರಿಯನ್ನು ಸಂಪರ್ಕಿಸಿ ಮಾರ್ಗದರ್ಶನ ಪಡೆಯುವುದು. ಜಿಲ್ಲಾ ಚುನಾವಣಾಧಿಕಾರಿಯು ಆಯೋಗವನ್ನು ಸಂಪರ್ಕಿಸಿ ಸಮಸ್ಯೆಗಳೇನಾದರೂ ಉದ್ಭವಿಸಿದಲ್ಲಿ ಪರಿಹರಿಸಿಕೊಳ್ಳುವುದು. ಜಿಲ್ಲಾ ಚುನಾವಣಾಧಿಕಾರಿಯವರು ಜಿಲ್ಲಾಡಳಿತ /ತಾಲ್ಲೂಕಿನ ತಹಸೀಲ್ದಾರ್ ರವರ ಜೊತೆ ನಿಕಟ ಸಂಪರ್ಕವಿಟ್ಟು ಕೊಂಡು ವಿವಿಧ ಚುನಾವಣೆಗಳ ಬಗ್ಗೆ ಮಾಹಿತಿ ಪಡೆಯುವುದು.

(ಎನ್.ಸಿ. ಮುನಿಯಪ್ಪ)
ಆಯುಕ್ತರು

**ಪ್ರತಿಗಳು,**

1. ಸಹಕಾರ ಸಂಘಗಳ ಎಲ್ಲಾ ಜಿಲ್ಲೆಗಳ ಉಪನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳುಉ
2. ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರು
3. ಸಹಕಾರ ಸಂಘಗಳ ನಿಬಂಧಕರು ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು -560052
4. ಎಲ್ಲಾ ಸಹಕಾರ ಸಂಘಗಳ ಅಪರ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು
5. ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರು
6. ಎಲ್ಲಾ ಸಹಕಾರ ಸಂಘಗಳ ಜಂಟಿ ನಿಬಂಧಕರು, ಸಹಕಾರ ಸಂಘಗಳ ನಿಬಂಧಕರ ಕಛೇರಿ ಬೆಂಗಳೂರು.